ಶ್ರೀ ಕೆ. ಪ್ರತಾಪ ಚಂದ್ರಶೆಟ್ಟಿ.— ಸಂಸ್ಥೆಗಳು ರೋಗಗ್ರಸ್ಥವಾಗುವುದಕ್ಕೆ ೮ ಕಾರಣಗಳನ್ನು ಕೊಟ್ಟಿದ್ದೀರಿ. ಇಷ್ಟಾದರೂ ಕೂಡ ಮತ್ತೆ ಫೈನಾನ್ಸ್ ಏತಕ್ಕೆ ಮಾಡುತ್ತೀರಿ ? ಸಿಕ್ ಯೂನಿಟ್ ಇದ್ದರೂ ಕೂಡ ಮತ್ತೆ ಹಣ ಕೊಡುವಂತಹ ಉದ್ದೇಶ ಏನು ? ಇವುಗಳ ಸುಧಾರಣೆಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎಂ. ರಘುಪತಿ.— ಇವುಗಳ ಬಗ್ಗೆ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇವೆ. ತರಬೇತಿ ಕೊಡುತ್ತಿದ್ದೇವೆ. ಸಲಹೆ ಕೊಡುತ್ತಿದ್ದೇವೆ. ರಾಜ್ಯದ ಹಿತದೃಷ್ಟಿಯಿಂದ, ಬಂಡವಾಳಗಾರರ ಹಿತ ದೃಷ್ಟಿಯಿಂದ ಮತ್ತು ಕಾರ್ಮಿಕರ ಹಿತದೃಷ್ಟಿಯಿಂದ ಆದಷ್ಟು ಸಹಾಯ ಮಾಡಿಂತಿದ್ದೇವೆ. ಇಷ್ಟೆಲ್ಲಾ ಮಾಡಿ ಮತ್ತೆ ತೊಂದರೆಗೆ ಒಳಗಾದರೆ, ಅಂತಹದ್ದನ್ನು ಮುಚ್ಚುತ್ತೇವೆ.

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ.— ಮಂತ್ರಿಗಳು ಹಾರಿಕೆ ಉತ್ತರ ಕೊಟ್ಟಿದ್ದಾರೆ.

ಮೈಸೂರು ಕಾಗದದ ಕಾರ್ಖಾನೆ ಬಗ್ಗೆ

೧೪೩೭. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು)—ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಭದ್ರಾವತಿಯಲ್ಲಿರುವ ಪೇಪರ್ ಮಿಲ್‌ಗೆ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರ ಹಾಕಿರುವ ಒಟ್ಟು ಬಂಡವಾಳದ ಪೊತ್ತವೆಷ್ಟು ?

ಆ) ಸದರಿ ಉದ್ಯಮದಿಂದ ೧೯೫೫-೫೬, ೧೯೫೬-೫೭, ೧೯೫೭-೫೮ ತಹಲ್‌ವರೆಗೆ ಬಂದಿರುವ ಲಾಭ ಹಾಗೂ ನಷ್ಟವೆಷ್ಟು ?

ಇ) ಈ ಉದ್ಯಮದ ಸ್ಥಿತಿಗತಿಗಳನ್ನು ಸರಿಪಡಿಸಲು ಸರ್ಕಾರವು ಕೈಗೊಂಡಿರುವ ಯೋಜನೆಗಳೇನು ?

ಶ್ರೀ ಜೆ. ಹೆಚ್. ಪಟೇಲ್ (ಬೃಹತ್ ಮತ್ತು ಮಧ್ಯಮ ಹಾಗೂ ವಿದ್ಯುಚ್ಛಕ್ತಿ ಸಚಿವರು)—

ಅ) ರಾಜ್ಯ ಸರ್ಕಾರ ಹೂಡಿರುವ ಬಂಡವಾಳ —ರೂ. ೪೧,೯೯,೯೯,೨೩೦,೯೦೦.
ಕೇಂದ್ರ ಸರ್ಕಾರ ಹೂಡಿರುವ ಬಂಡವಾಳ—ಇಲ್ಲ.

ಆ) ಲಾಭ/ನಷ್ಟದ ವಿವರ ಈ ಕೆಳಗಿನಂತಿದೆ.

	ಲಾಭ	ನಷ್ಟ
	(ಲಕ್ಷ ರೂ.ಗಳಲ್ಲಿ)	
೧೯೫೫-೫೬	೪೨೭.೦೮ (ಸವಕಳಿ ಒದಗಿಸುವ ಮುನ್ನ)	...
೧೯೫೬-೫೭	೩೫೦.೭೩ (ಸವಕಳಿ ಒದಗಿಸಿಂವ ಮುನ್ನ)	...
೧೯೫೭-೫೮	ಲೆಕ್ಕ ಪತ್ರದ ಪರಿಶೋಧನೆಯ ಕೆಲಸ ಇನ್ನೂ ಮುಗಿದಿಲ್ಲ.	

ಇ) ಸರ್ಕಾರವು ಈ ಕೆಳಗಿನ ಕ್ರಮಂ ಕೈಗೊಳ್ಳಲು ಯೋಚಿಸಿದೆ.—

೧. ಕಂಪನಿಯ ಬಂಡವಾಳ ಹೂಡಿಕೆಯ ವಿಚಾರವನ್ನು ಪುನರ್ ವಿಮರ್ಶಿಸಿ ಸಾಲದ ಒಂದು ಭಾಗವನ್ನು ಮತ್ತು ಈಗಾಗಲೇ ಕೊಡಬೇಕಾಗಿರುವ ಬಡ್ಡಿಯನ್ನು ಈಕ್ವಿಟಿ ಬಂಡವಾಳವಾಗಿ ಪರಿವರ್ತಿಸುವುದಲ್ಲದೆ ಬಾಕಿ ಇರುವ ಬಡ್ಡಿಯನ್ನು ಕೈಬಿಡಲಾಗುವುದು.

೨. ಅವಧಿ ಸಾಲ ಮತ್ತು ವ್ಯವಹಾರಿಕ ಬಂಡವಾಳದ ಮೇಲಿನ ಬಡ್ಡಿಯನ್ನು ಕಡಿಮೆ ಮಾಡುವುದು.

೩. ಅವಧಿ ಸಾಲದ ಕಂತುಗಳನ್ನು ಪುನರ್ ವಿವರ್ಶಿಸುವುದು.

೪, ವಾರ್ತಾ ವಂದ್ರಣ ಕಾಗದ ಪೂರಾಟ ತೆರಿಗೆ, ಆಮದು ಮಾಡಿಕೊಳ್ಳುವ ತಿರುಳಿನ ಮೇಲೆ ಸುಂಕ, ವಿದ್ಯುಚ್ಛಕ್ತಿ ತೆರಿಗೆ, ನೀರಿನ ಮೇಲಿನ ತೆರಿಗೆ, ಬಿಡಿ ಭಾಗಗಳ ಆಮದಿನ ಮೇಲೆ ತೆರಿಗೆ ವಿನಾಯಿತಿ.

೫. ಆರಣ್ಯದಿಂದ ಸರಬರಾಜಾಗುವ ಕಚ್ಚಾ ಪದಾರ್ಥಗಳ ಮೇಲೆ ರಿಯಾಯಿತಿ ದರದಲ್ಲಿ ಗೌರವಧನ.

ಶ್ರೀ ಎಂ. ರಘುಪತಿ.—ಸ್ವಾಮಿ, ಉತ್ತರದಲ್ಲಿ ಸ್ವಲ್ಪ ತಪ್ಪು ಇದೆ. ಅದನ್ನು ತಿದ್ದಿಕೊಳ್ಳಬೇಕು. ೧೯೮೫-೮೬ರಲ್ಲಿ ಪ್ರಾಫಿಟ್ ಬಿಫೋರ್ ಡಿಪ್ರಿಸಿಯೇಷನ್ ೪೮.೩೪ ಲಕ್ಷ, ಡಿಪ್ರಿಸಿಯೇಷನ್ ೪೯೭.೦೮ ಲಕ್ಷ, ಲಾಸೆಸ್ ೧೮.೨೪ ಲಕ್ಷ. ೧೯೮೬-೮೭ರಲ್ಲಿ ೭೫ ೧೧ ಲಕ್ಷ. ಡಿಪ್ರಿಸಿಯೇಷನ್ ೩೨.೭೩ ಲಕ್ಷ ಲಾಭ ೩೯.೩೮ ಲಕ್ಷ. ಲೆಕ್ಕಪತ್ರಗಳು ಇನ್ನು ಆಡಿಟ್ ಆಗಿಲ್ಲ. ಆಡಿಟ್ ಆಗಿ ಬಂದ ತಕ್ಷಣ ಅದನ್ನು ಮಾನ್ಯ ಸದಸ್ಯರಿಗೆ ಕಳುಹಿಸಿ ಕೊಡುತ್ತೇನೆ.

ಶ್ರೀ ಆರ್. ವೆಂಕಟರಾವಮ್ಮಯ್ಯ,—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ನನ್ನ ಪ್ರಶ್ನೆಯನ್ನು ಸರಿಯಾಗಿ ಅರ್ಥಮಾಡಿಕೊಂಡಿಲ್ಲವೆಂದು ನಾನು ಅಂದುಕೊಂಡಿದ್ದೇನೆ. ಏಕೆಂದರೆ ೪೮.೩೪ ಲಕ್ಷ ಪ್ರಾಫಿಟ್ ಮತ್ತು ಡಿಪ್ರಿಸಿಯೇಷನ್ ಹೋದಮೇಲೆ ನಷ್ಟ ಎಂದು ಹೇಳಿದರು, ಪುನಃ ೭೫.೧೧ ಲಕ್ಷ ಡಿಪ್ರಿಸಿಯೇಷನ್ ಬಂದರೂ ೩೫ ಲಕ್ಷ ನಷ್ಟ ಎಂದು ಹೇಳಿದರು. ಅಂದರೆ ಈಗ ಇದು ೩೫ ಲಕ್ಷ ರೂಪಾಯಿ ನಷ್ಟದಲ್ಲಿದೆ. ಆದರೂ ಇದು ಲಾಭದಲ್ಲಿದೆ ಎಂದು ಅವರು ಹೇಳಿದರು. ಆದರೆ ಅವರು ಹೇಳಿದ್ದು ಸರಿಯಲ್ಲ. ಮಾನ್ಯ ಮಂತ್ರಿಗಳಿಗೆ ಇದು ಅರ್ಥವಾಗಿದೆಯೋ, ಇಲ್ಲವೋ ನನಗೆ ಗೊತ್ತಿಲ್ಲ. ಡಿಪ್ರಿಸಿಯೇಷನ್ ಹೋದಮೇಲೆ ಇದು ನಷ್ಟದಲ್ಲಿದೆ. ಸ್ವಾಮಿ, ಈ ಉದ್ದಿಮೆಯಲ್ಲಿ ಕೇವಲ ಪೇಪರ್ ತಯಾರಿಕೆ ಒಂದೇ ಇಲ್ಲ. ಸಕ್ಕರೆ, ಸಿಮೆಂಟ್ ಕಾರ್ಖಾನೆ ಕೂಡ ಇದರಲ್ಲಿದೆ, ಇಂಥ ಉದ್ದಿಮೆಯಲ್ಲಿ ಬಹಳ ನಷ್ಟವಾಗಿರುವುದು ಶೋಚನೀಯವಲ್ಲವೆ ? ಅವರು ಪೂರ್ತಿ ಉತ್ತರವನ್ನು ಓದಲಿಲ್ಲ. ಅರ್ಧಂಬರ್ಧ ಓದಿಬಿಟ್ಟರು.

ಶ್ರೀ ಎಂ. ರಘುಪತಿ.—ನಾನು ಪೂರ್ತಿ ಓದುತ್ತಿದ್ದೆ. ಆದರೆ ಅಷ್ಟರಲ್ಲಿ ನೀವು ಎದ್ದುನಿಂತಿಬಿಟ್ಟಿರಿ. ಆಗಲಿ ತಾವು (ಸಿ) ಪ್ರಶ್ನೆಯ ಉತ್ತರವನ್ನು ನೋಡಿ. ಅದರಲ್ಲಿ ವಿವರವಾಗಿ ಎಲ್ಲವನ್ನೂ ಕೊಟ್ಟಿದ್ದೇನೆ.

ಶ್ರೀ ಆರ್. ವೆಂಕಟರಾವಮ್ಮಯ್ಯ,—ಮಾನ್ಯ ಅಧ್ಯಕ್ಷರೆ, ಇಷ್ಟೆಲ್ಲಾ ರಿಯಾಯಿತಿ ಕೊಟ್ಟಿದ್ದರೂ ಕೂಡ ೧೯೮೭-೮೮ರ ಸಾಲಿನ ಅಕೌಂಟ್ಸ್ ಆಡಿಟ್ ಆಗಿಲ್ಲ. ಎಂದು ಮಾನ್ಯ ಸಚಿವರು ಸ್ಪಷ್ಟವಾಗಿ ಹೇಳಿದ್ದಾರೆ, ಇದನ್ನು ನೋಡಿದರೆ ಲಾಸ್ ಆಗಿರುವುದನ್ನು ಲಾಸ್ ಎಂದು ತೋರಿಸಬಾರದು ಎಂದು ಮಾನ್ಯ ಸಚಿವರು ಈ ರೀತಿ ಉತ್ತರ ಕೊಟ್ಟಿದ್ದಾರೆಂದು ನಾನು ಭಾವಿಸಿಕೊಳ್ಳಲೆ ? ಈ ಕಾರ್ಖಾನೆಯ ಉತ್ಪನ್ನಗಳಿಗೆ ಬಹಳಷ್ಟು ಬೇಡಿಕೆ ಇದೆ. ಪೇಪರ್, ಸಕ್ಕರೆ, ಸಿಮೆಂಟ್‌ಗೆ ಬಹಳ ಬೇಡಿಕೆ ಇದೆ. ಅಂಥಾದ್ದರಲ್ಲಿ ನಷ್ಟವಾಗುವುದಕ್ಕೆ ಕಾರಣವೇನು ? ಇದು ಯಾವರೀತಿ ನಷ್ಟವಾಗಿದೆ, ಇದನ್ನು ಯಾವ ರೀತಿ ಸರಿಪಡಿಸಬಹುದೆಂಬ ಬಗ್ಗೆ ಡೀಪ್ ಅನಾಲಿಸಿಸ್ ಮಾಡಿ ತಿಳಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ರಘುಪತಿ.—ಈ ನಷ್ಟವನ್ನು ಸರಿಪಡಿಸುವುದಕ್ಕೆ

ಶ್ರೀ ಆರ್. ವೆಂಕಟರಾವಮ್ಮಯ್ಯ.—ಮಾನ್ಯ ಅಧ್ಯಕ್ಷರೆ, ಮಾನ್ಯ ಜೆ. ಹೆಚ್. ಪಟೇಲ್‌ರವರೇ ಇದನ್ನು ಒಪ್ಪಿಕೊಂಡಿದ್ದಾರೆ ಆದರೆ ಮಾನ್ಯ ರಘುಪತಿಯವರು ಉತ್ತರ ಹೇಳುವುದಕ್ಕೆ ಬಹಳ ತಡವರಿಸುತ್ತಿದ್ದಾರೆ. ಅವರಿಗೆ ಸರಿಯಾಗಿ ಗೊತ್ತಿದ್ದರೆ ಉತ್ತರವನ್ನು ಹೇಳಲಿ, ಇಲ್ಲದಿದ್ದರೆ ಬೇಡ, ಏಕೆಂದರೆ, ಅವರು ಅಂಕಿಅಂಶಗಳನ್ನು ಕೊಡುವಾಗ ಲಾಭವನ್ನು ನಷ್ಟ ಎಂದು ಹೇಳಿದರು, ಅದೇರೀತಿ ನಷ್ಟವನ್ನು ಲಾಭ ಎಂದು ಹೇಳಿದರು.

ಶ್ರೀ ಎಂ. ರಘುಪತಿ —ಮಾನ್ಯ ಅಧ್ಯಕ್ಷರೆ, ಈ ಸಂಸ್ಥೆ ಲಾಭದಲ್ಲಿ ನಡೆಯುತ್ತಿದೆ. ಆದ್ದರಿಂದ ಈ ವರ್ಷದ ಅಕೌಂಟ್ಸ್ ಆಡಿಟ್ ಆಗಿಲ್ಲ ಎಂದು ಸಚಿವರು ಉತ್ತರ ಕೊಟ್ಟಿರುವುದು ಸರಿಯಲ್ಲ ಎಂದು ಅವರು ಹೇಳಿದ್ದು ಸತ್ಯಕ್ಕೆ ದೂರವಾದುದು ನಿಜವಾಗಿಯೂ ಲೆಕ್ಕಪತ್ರಗಳ ಆಡಿಟ್ ಆಗಿಲ್ಲ. ಅದು ಆಡಿಟ್ ಆದ ಕೂಡಲೇ ಮಾನ್ಯ ಸದಸ್ಯರಿಗೆ ಅದನ್ನು ಕಳುಹಿಸಿಕೊಡುತ್ತೇನೆ.

ಇನ್ನು ಎರಡನೆಯುದಾಗಿ, ಇದರಲ್ಲಿ ಕೇಂದ್ರದ ಒಂದು ರೀತಿ ಇದೆ. ಅದೇನೆಂದರೆ, ನಾವು ಕಾಗದವನ್ನು ತಯಾರಿಸಬೇಕಾದರೆ ಅವರು ಕೆಲವು ರೇಟುಗಳನ್ನು ಫಿಕ್ಸ್ ಮಾಡುತ್ತಾರೆ. ಅವರು ಫಿಕ್ಸ್ ಮಾಡಿದ ರೇಟಿಗೇ ನಾವು ಕಾಗದವನ್ನು ಮಾರಬೇಕಾಗುತ್ತದೆ. ಒಂದುರೀತಿಯಿಂದ ತೊಂದರೆಯಾಗುತ್ತದೆ. ಈ ತೊಂದರೆಯಿಂದಾಗಿ ಅನೇಕ ಸಾರಿ ಲಾಭಗಳಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ ಅವರು ಏನು ರೇಟು ಫಿಕ್ಸ್ ಮಾಡುತ್ತಾರೆ ಆ ರೇಟಿಗೆ ನಾವು ಮಾರಾಟ ಮಾಡಬೇಕಾದ್ದರಿಂದ. ಈ ಕಾರಣದಿಂದಲೂ ಕೂಡ ಕೆಲವು ಸಾರಿ ಲಾಭ ಅಥವಾ ನಷ್ಟ ಆಗುವುದಕ್ಕೆ ಅವಕಾಶವಿದೆಯೆಂದು ಹೇಳಬಯಸುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ ನಾನು ಒಂದು ವಿವರಣೆಯನ್ನು ಕೇಳುತ್ತಿದ್ದೇನೆ, ನಷ್ಟದಲ್ಲಿದ್ದರೆ ಎಷ್ಟು ನಷ್ಟ ? ಲಾಭದಲ್ಲಿದ್ದರೆ ಎಷ್ಟು ಲಾಭ ಬಂದಿದೆ ಎನ್ನುವುದನ್ನು ಮಾನ್ಯ ಸಚಿವರು ಹೇಳಬೇಕು ?

ಶ್ರೀ ಎಂ. ರಘುಪತಿ.—ಈಗ ನನ್ನಬಳಿ ವಿವರಗಳಿಲ್ಲ. ವಿವರಗಳನ್ನು ಕಳುಹಿಸಿ ಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಪ್ರಶ್ನೆ ಸ್ಪಷ್ಟವಾಗಿದೆ. ಸರ್ಕಾರಿ ಉದ್ಯಮಗಳಿಂದ ೧೯೮೫-೮೬-೮೭-೮೮ಕ್ಕೆ ಬಂದಿರುವ ಲಾಭ ಹಾಗೂ ನಷ್ಟ ಎಷ್ಟು ಎಂದು ಸ್ಪಷ್ಟವಾಗಿ ಪ್ರಶ್ನೆ ಇದೆ. ಲಾಭ ಮತ್ತು ನಷ್ಟ ಇಷ್ಟು ಇದೆ ಎಂದು ಮಾನ್ಯ ಸಚಿವರು ಹೇಳಲಿ.

ಅಧ್ಯಕ್ಷರು.—ಬ್ಯೂರೋ ಆಫ್ ಎಂಟರ್ ಪ್ರೈಸಸ್‌ರವರು ಒಂದು ದೊಡ್ಡ ಲಿಸ್ಟನ್ನೇ ಕೊಟ್ಟಿದ್ದಾರೆ. ೧೯೮೫-೮೬ರ ಲಿಸ್ಟನ್ನು ಕೊಟ್ಟಿದ್ದಾರೆ.

SRI M. MALLIKARJUNA KHARGE.—I am very sorry. You expect that members should know everything and the man who is holding the portfolio is not holding the information.

ಅಧ್ಯಕ್ಷರು.—ಹಾಗಾದರೆ ನಿಮಗೆ ಇನ್‌ಫರ್‌ಮೇಷನ್ ಯಾವ ರೀತಿ ಕೊಡಬೇಕು ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ,—ಎಲ್ಲ ಸದಸ್ಯರಿಗೂ ಅದನ್ನು ನೋಡಿಕೊಳ್ಳಿ ಎಂದಂ ಹೇಳುತ್ತೀರಾ ? ಸ್ಪಷ್ಟವಾಗಿ ಲುಕ್ಸಾನು ಎಷ್ಟಾಗಿದೆ ಎಂದು ಕೇಳುವಾಗ ?

ಶ್ರೀ ಆರ್. ವೆಂಕಟರಾಮಯ್ಯ.—ಬ್ಯೂರೋ ಆಫ್ ಎಂಟರ್‌ಪ್ರೈಸಸ್ ೧೯೮೫-೮೬ರವರೆಗೆ ವಿವರಗಳನ್ನು ಕೊಟ್ಟಿದ್ದಾರೆ. ಆದರ ಪ್ರಕಾರ ಉತ್ತರವನ್ನೂ ಸಹ ಕೊಟ್ಟಿದ್ದಾರೆ. ಆಫೀಸರುಗಳು ೧೦ ಲಕ್ಷ ೨೦ ಲಕ್ಷ ರೂಪಾಯಿಗಳನ್ನು ಲಪಟಾಯಿಸಿದ್ದಾರೆಂದು ಆರೋಪ ಇದೆ. ಮ್ಯಾನೇಜ್‌ಮೆಂಟ್ ಮತ್ತು ಚೇರ್‌ಮೆನ್‌ರವರು ವಿಂಸ್ ಆಪ್ರೇಷ್ಯಿಯೇಷನ್ ಮಾಡಿದ್ದಾರೆಂದು ಆಪಾದನೆಗಳು ಇವೆ. ಅದರ ಬಗ್ಗೆ ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಂ. ರಘುಪತಿ.—ಮಾನ್ಯ ಸದಸ್ಯರು ಸರಿಯಾದ ಮಾಹಿತಿಯನ್ನು ಒದಗಿಸಿ ಕೊಟ್ಟರೆ, ಸೂಕ್ತ ತನಿಖೆ ಮಾಡಿಸುತ್ತೇನೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರ

ಉತ್ತರ ಕನ್ನಡ ಜಿಲ್ಲೆಯಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಲ್ಲಿನ ತಂತಿ ಕಾಣೆಯಾಗಿರುವುದು

೧೪೬೪. ಶ್ರೀ ಗೋಪಾಲಮಯ್ಯಂದ ಕಾನಡೆ (ಸಿರ್ಸಿ).—ಮಾನ್ಯ ವಿದ್ಯುತ್ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಉತ್ತರ ಕನ್ನಡ ಜಿಲ್ಲೆಯ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಕಛೇರಿಯಲ್ಲಿ ತಂತಿಗಳು ಕಾಣೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಆ) ಸದರಿ ಕಾಣೆಯಾಗಿರುವ ತಂತಿಗಳ ಅಂದಾಜು ಮೊತ್ತವೆಷ್ಟು ?

(ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು? (ವಿವರ ನೀಡುವುದು).